
ಅರುಣ ಪಿ. ಭಟ್ಟ


# ವಾರಭವಿಷ್ಯ 19.05.2022 ಗುರುವಾರದಿಂದ 25.05.2022




ಯಾರು ಉದ್ಯೋಗ ಜೀವನ ಈಗ ಆರಂಭಿಸಬೇಕು ಎಂದಿರುತ್ತಾರೋ ಅಂಥವರಿಗೆ ಇದು ಸೂಕ್ತವಾದ ಸಮಯ. ಯಶಸ್ಸು ಪಡೆಯುವ ಅವಕಾಶ ಹೆಚ್ಚಿದೆ. ಆದರೆ ಇದಕ್ಕಾಗಿ ಹೆಚ್ಚಿನ ಪರಿಶ್ರಮ ಹಾಕಬೇಕು. ವ್ಯಾಪಾರ ವ್ಯವಹಾರ ಮಾಡುತ್ತಿರುವವರಿಗೆ ಲಾಭದ ಪ್ರಮಾಣ ಹೆಚ್ಚಲಿದೆ. ಇದರಿಂದ ನಿಮ್ಮ ಜೀವನ ಮಟ್ಟ ಮುಂದಿನ ಹಂತಕ್ಕೆ ಹೋಗುತ್ತದೆ. ಶುಭದಿನ **19**. ನವದುರ್ಗಾ ಆರಾಧನೆ ಮಾಡಿರಿ.

---

ಈವರೆಗೆ ಏನಾದರೂ ಸಮಸ್ಯೆಗಳು ಕಾಡುತ್ತಿದ್ದಲ್ಲಿ ನಿವಾರಣೆ ಆಗುತ್ತದೆ. ವಾರದ ಶುರುವಿನಲ್ಲಿ ಅದೃಷ್ಟ ನಿಮ್ಮ ಪಾಲಿಗೆ ಇರುತ್ತದೆ. ಉದ್ಯೋಗ ಸ್ಥಳದಲ್ಲೂ ನಿಮ್ಮ ಬಗ್ಗೆ ಗೌರವ ಹೆಚ್ಚಳವಾಗುತ್ತದೆ. ಆರೋಗ್ಯ ಉತ್ತಮವಾಗಿರುತ್ತದೆ. ಸಹೋದ್ಯೋಗಿಗಳ ಪ್ರಗತಿಗೆ ಸಹಕಾರ ನೀಡಲಿದ್ದೀರಿ. ಅಗತ್ಯ ಇರುವವರಿಗೆ ಕೆಲಸ ಕೊಡಿಸಲು ಪ್ರಯತ್ನಿಸಲಿದ್ದೀರಿ. ಶುಭದಿನ **21**. ಶ್ರೀರಾಮರಕ್ಷಾ ಸ್ತೋತ್ರ ಪಠಣ ಮಾಡಿರಿ.




---




ವಾರದ ಶುರು ಉತ್ತಮವಾಗಿರುತ್ತದೆ. ಆಪ್ತರ ಜತೆಗಿನ ನಿಮ್ಮ ಬಾಂಧವ್ಯಕ್ಕೆ ಇನ್ನಷ್ಟು ಗಟ್ಟಿತನ ಬರುತ್ತದೆ. ಸುಮಧುರ ಕ್ಷಣಗಳನ್ನು ಕಳೆಯಲಿದ್ದೀರಿ. ಈ ಹಿಂದೆ ಕುಟುಂಬದಲ್ಲಿದ್ದ ಮನಸ್ತಾಪಗಳನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡಲಿದ್ದೀರಿ. ವೃತ್ತಿಪರವಾದ ಜವಾಬ್ದಾರಿಗಳನ್ನು ಪೂರೈಸುವುದಕ್ಕೆ ಹೆಚ್ಚು ಸಮಯ ಮೀಸಲಿಡಬೇಕಾಗುತ್ತದೆ. ಶುಭದಿನ **22**. ಶಿವಕವಚ ಸ್ತುತಿಸಿರಿ.

---

ವಾರದ ಆರಂಭದಲ್ಲಿ ವೈವಾಹಿಕ ಜೀವನದಲ್ಲಿ ಸುಮಧುರ ಕ್ಷಣಗಳನ್ನು ಕಳೆಯಲಿದ್ದೀರಿ. ಈ ವಾರವಿಡೀ ವಿವಾಹಿತರಿಗೆ ಸಂತುಷ್ಟವಾದ ಸಮಯ. ದೈಹಿಕ ಸದೃಢತೆ ಹಾಗೂ ಆರೋಗ್ಯ ಉತ್ತಮವಾಗಿ ಇರಲಿದೆ. ವ್ಯವಹಾರ ಮಾಡುವವರಿಗೆ ಪದೋನ್ನತಿ ಇದೆ. ವಾರದ ದ್ವಿತೀಯಾರ್ಧದಲ್ಲಿ ಹಲವು ಗುರಿಗಳನ್ನು ಸಾಧಿಸುತ್ತೀರಿ. ವೃತ್ತಿಪರರು ಹೆಚ್ಚು ಪರಿಶ್ರಮ ಹಾಕಿ ಕೆಲಸ ಮಾಡಲಿದ್ದೀರಿ. ಶುಭದಿನ **24**. ಹನುಮಾನ್ ಚಾಲೀಸ್ ಓದಿರಿ.




---




ಕೌಟುಂಬಿಕ ವಿಷಯದಲ್ಲಿ ಉತ್ತಮವಾದ ಪ್ರಗತಿ ಇದೆ. ಸ್ಪರ್ಧಾತ್ಮಕ ಅಥವಾ ಕ್ರೀಡಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಉತ್ತಮ. ನಿಮ್ಮ ವಿರೋಧಿಗಳು ಹೂಡಿರುವ ಷಡ್ಯಂತ್ರವನ್ನು ಮುರಿಯುವಲ್ಲಿ ಸಫಲರಾಗುವಿರಿ. ಕಾನೂನು ವಿಚಾರಗಳು, ರಾಜಕಾರಣದಲ್ಲಿ ವಿರೋಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ವಿವಾಹಿತರಾಗಿದ್ದಲ್ಲಿ ಶುಭ ಸುದ್ದಿ ಕೇಳುವ ಯೋಗಗಳಿವೆ. ಶುಭದಿನ **22**. ವಿಷ್ಣು ಸಹಸ್ರನಾಮ ಪಠಿಸಿರಿ.

---

ವಾರದ ಶುರುವಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮ ಪ್ರಗತಿ ಇದೆ. ಬರಹಗಾರರ ಬರವಣಿಗೆ ಮತ್ತಷ್ಟು ಆಕರ್ಷಕವಾಗಲಿದೆ. ಹಣಕಾಸು ಸಮಸ್ಯೆಗಳು ಬಗೆಹರಿದು, ಸ್ಥಿರತೆ ಕಾಣಬಹುದು. ಸಂತಾನ ಅಪೇಕ್ಷಿತ ದಂಪತಿಗೆ ಶುಭ ಸುದ್ದಿ ದೊರೆಯಲಿದೆ. ವಾರದ ಮಧ್ಯಭಾಗದಲ್ಲಿ ನಾನಾ ಕಾರಣಗಳಿಗೆ ಚಿಂತೆ ಕಾಡುತ್ತದೆ. ಅನಾರೋಗ್ಯ ಸಮಸ್ಯೆಗಳು ಕಾಡಬಹುದು. ಶುಭದಿನ **20**. ಸೌಂದರ್ಯ ಲಹರಿ ಪಠಿಸಿರಿ.




---




ವಾರದ ಶುರುವಿನಲ್ಲಿ ವ್ಯಾಪಾರ ಮಾಡುವವರಿಗೆ ಉತ್ತಮ ಪ್ರಗತಿ ಇದೆ. ಉದ್ಯೋಗ ಜೀವನ ಆರಂಭಿಸಬೇಕು ಅಂತಿರುವವರಿಗೆ ಉತ್ತಮ ಅವಕಾಶ ದೊರೆಯಲಿದೆ. ಹಲವು ಬಗೆಯಲ್ಲಿ ಯಶಸ್ಸು ಕಾಣಲಿಕ್ಕೆ ಅವಕಾಶಗಳು ದೊರೆಯಲಿವೆ. ವೈವಾಹಿಕ ಜೀವನದಲ್ಲಿ ಸಂತೋಷ, ಸಂಭ್ರಮ ಪಡಲಿದ್ದೀರಿ. ಸಂಗಾತಿ ಜತೆಗೆ ಭಿನ್ನಾಭಿಪ್ರಾಯ ಇದ್ದಲ್ಲಿ ನಿವಾರಣೆ ಆಗುತ್ತದೆ. ಶುಭದಿನ **21**. ಕಾಲಭೈರವನ ಸೇವೆ ಮಾಡಿರಿ.

---

ನಿಮ್ಮ ಪ್ರೀತಿಪಾತ್ರರ ಜತೆಗಿನ ಬಾಂಧವ್ಯ ಗಟ್ಟಿಯಾಗಲಿದೆ. ವಾರದ ಮೊದಲ ಭಾಗದಲ್ಲಿ ನಿಮ್ಮ ಪಾಲಿಗೆ ಅದೃಷ್ಟ ಇರಲಿದೆ. ದೊಡ್ಡ ಮಟ್ಟದ ಪ್ರಶಸ್ತಿಗೆ ಪಾತ್ರರಾಗಲಿದ್ದೀರಿ. ಉದ್ಯೋಗಕ್ಕಾಗಿ ಹುಡುಕುವವರಿಗೆ ಯಶಸ್ಸು ದೊರೆಯಲಿದೆ. ವಾರದ ದ್ವಿತೀಯಾರ್ಧದಲ್ಲಿ ವೃತ್ತಿ ಜೀವನದಲ್ಲಿ ಉತ್ತಮ ಫಲಿತಾಂಶ ದೊರೆಯಲಿದೆ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಶುಭದಿನ **22**. ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.




---




ವಾರದ ಶುರುವಿನಲ್ಲಿ ಭೂಮಿ ಆಸ್ತಿ ವಿಚಾರದಲ್ಲಿ ಲಾಭ ಪಡೆದುಕೊಳ್ಳುವ ಅವಕಾಶ. ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಳ್ಳಲಿದೆ. ಕೌಟುಂಬಿಕ ವಿಚಾರದಲ್ಲಿ ಸಣ್ಣ ಪುಟ್ಟ ಸಮಸ್ಯೆಯಾದರೂ ಎದುರಾಗಲಿದೆ. ವಾರದ ದ್ವಿತೀಯಾರ್ಧದಲ್ಲಿ ರಾಜಕಾರಣದಲ್ಲಿ ಇರುವವರಿಗೆ ಪ್ರಗತಿ ಇದೆ. ಧಾರ್ಮಿಕ ಹಾಗೂ ಆಧ್ಯಾತ್ಮಿಕ ವಿಚಾರದ ಕಡೆಗೆ ಒಲವು ಹೆಚ್ಚಲಿದೆ. ಶುಭದಿನ **21**. ಚಂಡಿ ಪಾರಾಯಣ ಮಾಡಿರಿ.

---

ಹಲವು ಕ್ಷೇತ್ರದಲ್ಲಿ ಅಂದುಕೊಂಡಂಥ ಫಲಿತಾಂಶವನ್ನು ಸಾಧಿಸಲಿದ್ದೀರಿ. ಆರೋಗ್ಯ ಉತ್ತಮವಾಗಿದ್ದು, ಚೈತನ್ಯದಿಂದ ಕಾಣಿಸಿಕೊಳ್ಳಲಿದ್ದೀರಿ. ಈಗಾಗಲೇ ಆರೋಗ್ಯ ಸಮಸ್ಯೆಗಳು ಇದ್ದಲ್ಲಿ ಅವುಗಳಿಂದ ನಿವಾರಣೆ ಕಾಣಿಸಿಕೊಳ್ಳಲಿದೆ. ವೃತ್ತಿಪರ ಗುರಿಯನ್ನು ಮುಟ್ಟಲು ಉತ್ಸಾಹದಿಂದ ಕೆಲಸ ಮಾಡಲಿದ್ದೀರಿ. ನಿಮ್ಮ ಪರಿಶ್ರಮವನ್ನು ಮೇಲಧಿಕಾರಿಗಳು ಮೆಚ್ಚುತ್ತಾರೆ. ಶುಭದಿನ **23**. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




---




ಷೇರು ವ್ಯವಹಾರದಲ್ಲಿ ಹೆಚ್ಚಿನ ಪ್ರಮಾಣದ ಲಾಭ ಕಾಣುವಿರಿ. ಕಾನೂನು ವಿಚಾರದಲ್ಲಿ ಪ್ರಗತಿ ಇದೆ. ವಿರೋಧಿಗಳ ವಿರುದ್ಧ ಪ್ರಬಲ ಕಾರ್ಯತಂತ್ರ ರೂಪಿಸಿ. ವ್ಯಾಪಾರದಲ್ಲಿ ಬಿಡುವಿಲ್ಲದಷ್ಟು ಕೆಲಸ ಕಾರ್ಯಗಳು ಬರಲಿವೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಅಂದುಕೊಂಡಂಥ ಫಲಿತಾಂಶವನ್ನು ಸಾಧಿಸಬಹುದು. ಶುಭದಿನ **20**. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.

---

ವಾರದ ಶುರುವಿನಿಂದಲೇ ಶೈಕ್ಷಣಿಕ ಕ್ಷೇತ್ರದಲ್ಲಿ ಅದರಲ್ಲೂ ವೈಜ್ಞಾನಿಕ ರಂಗದಲ್ಲಿ ಉತ್ತಮ ಫಲಿತಾಂಶ ಪಡೆಯುವಿರಿ. ಬೌದ್ಧಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಹೆಚ್ಚುವರಿ ಆದಾಯ ಮೂಲದಿಂದ ಅತ್ಯುತ್ತಮ ಪ್ರಮಾಣದ ಲಾಭವನ್ನು ನಿರೀಕ್ಷೆ ಮಾಡಬಹುದು. ನಿಮ್ಮ ಜೀವನಮಟ್ಟ ಹೆಚ್ಚಿಸಿಕೊಳ್ಳಲು ಶ್ರಮಿಸುತ್ತೀರಿ. ಯಶಸ್ಸು ನಿಮ್ಮ ಪಾಲಿಗೆ ದೊರೆಯಲಿದೆ. ಶುಭದಿನ **22**. ದಕ್ಷಿಣಾಮೂರ್ತಿ ಸ್ತೋತ್ರ ಪಠಣ ಮಾಡಿರಿ.

